3. ಅಧ್ಯಕ್ಷರ ಅಪ್ಪಣೆ ಮೇರೆಗೆ

(ಅ) ಗುಲ್ಬರ್ಗ ಜಿಲ್ಲೆಯ ಕಮಲಾಪುರ ಕ್ಷೇತ್ರದಲ್ಲಿ ಸೇತುವೆ ಕಾಮಗಾರಿ ಕೈಗೊಳ್ಳುವುದು

ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪುರ):- ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ಜಿಲ್ಲೆಯ ಕಮಲಾಪುರ ಕ್ಷೇತ್ರದಲ್ಲಿ ಒಂದು ಸೇತುವೆ ಎಂಟು ವರ್ಷಗಳ ಹಿಂದೆ ಕೊಚ್ಚಿಹೋಗಿದೆ. ಅದರ ಬಗ್ಗೆ ಪಿ.ಡಬ್ಲೂ ್ಯ.ಡಿ. ಸಚಿವರಾದ ಮಾನ್ಯ ಧರ್ಮಸಿಂಗ್‌ರವರ ಗಮನಕ್ಕೆ ತರುತ್ತಿದ್ದೇನೆ. ನಾನು ಶಾಸಕನಾಗುವುದಕ್ಕಿಂತ ಮೊದಲೇ ಆ ಸೇತುವೆ ಸಾಕಷ್ಟು ಮಳೆಯಿಂದಾಗಿ ಕೊಚ್ಚಿ ಹೋಗಿದೆ. ನಮ್ಮ ಗುಲ್ಬರ್ಗಾ ಜಿಲ್ಲೆಯ ಇಲಾಖೆಯಿಂದ ಅನೇಕ ಸಲ ಪ್ರಪೋಸಲ್‌ಗಳನ್ನು ಕಳುಹಿಸಿದ್ದಾರೆ. ಧರ್ಮಸಿಂಗ್ ಸಾಹೇಬರೇನೋ ರಸ್ತೆಗಳನ್ನು ಚೆನ್ನಾಗಿ ಮಾಡಿದ್ದಾರೆ, ಆದರೆ ಈ ಸೇತುವೆ ಹೇಗೆ ಅವರ ಕಣ್ಣ ತಪ್ಪಿಸಿ ಹೋಯಿತೋ ಗೊತ್ತಿಲ್ಲ. ಅಲ್ಲಿ ಬಹಳಷ್ಟು ಜನರು ಓಡಾಡುತ್ತಾರೆ. ವಾಹನ ಸಂಚಾರ ಸೌಕರ್ಯಕ್ಕೆ ತೊಂದರೆಯಾಗಿದೆ. ಮಳೆಗಾಲದಲ್ಲಿ ಹಳ್ಳದಲ್ಲಿ ನೀರು ಬಂತು ಎಂದರೆ ಅನೇಕ ಸಣ್ಣ ಸಣ್ಣ ಮಕ್ಕಳು, ದನಕರುಗಳು ಕೊಚ್ಚಿ ಹೋಗಿದ್ದಾವೆ. ಮಾನ್ಯ ಪಿ.ಡಬ್ಲೂ ್ಯ.ಡಿ. ಸಚಿವರು ಇದನ್ನು ಯಾವಾಗ ಮಾಡಿಕೊಡುತ್ತಾರೆ ಎಂಬ ಬಗ್ಗೆ ನಿರ್ದಿಷ್ಟವಾಗಿ ಹೇಳಬೇಕೆಂದು ನಾನು ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):- ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾದಿಂದ ಬಸವಕಲ್ಯಾಣಕ್ಕೆ ಹೋಗುವ ರಸ್ತೆಯಲ್ಲಿ ಈ ಸೇತುವೆಯ ಕೆಲಸವಾಗಬೇಕು. ಏಕೋ ಅದು ಬಿಟ್ಟು ಹೋಗಿದೆ. ಅದನ್ನು ನಬಾರ್ಡ್ ಏಡ್ಸ್ ನಲ್ಲಿ ಸೇರಿಸಿಕೊಳ್ಳತಕ್ಕಂತಹ ಪ್ರಯತ್ನ ಮಾಡುತ್ತೇನೆ.

(ಆ) ಬಂಟವಾಳ ತಾಲ್ಲೂಕಿನ ಬಾರಕಾಡು ಅಂಗನವಾಡಿಯಲ್ಲಿ ಕೆಲಸ ಮಾಡುತ್ತಿದ್ದ ಅಂಗಲವಿಕಲ ಕಾರ್ಯಕರ್ತೆಯನ್ನು ಬೇರೆ ಅಂಗನವಾಡಿಗೆ ವರ್ಗಾವಣೆ ಮಾಡಿರುವುದು.

ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು):- ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವರ ಗಮನಕ್ಕೆ ನಾನು ಒಂದು ವಿಚಾರವನ್ನು ತರಬಯಸುತ್ತೇನೆ. ಬಂಟವಾಳ ತಾಲ್ಲೂಕಿನ ಈ ಬಾರಕಾಡು ಅಂಗನವಾಡಿಯಲ್ಲಿ ಒಬ್ಬ ಅಂಗವಿಕಲರ ಕಾರ್ಯಕರ್ತೆ ಕೆಲಸ ಮಾಡುತ್ತಿದ್ದಾಳೆ. ಅವಳ ಬಲ ಭಾಗದ ಕಾಲು ಸರಿಯಾಗಿಲ್ಲ. ತುಂಬ ದೂರ ನಡೆಯಲು ಆಗುತ್ತಿಲ್ಲ. ಮನೆಯಲ್ಲಿ ವೃದ್ಧ ತಾಯಿಯನ್ನೂ ಅವರೇ ನೋಡಿಕೊಳ್ಳಬೇಕಾಗಿದೆ. ಅವರಿಗೆ ತಂದೆ ಇಲ್ಲ. ಈ ಪರಿಸ್ಥಿತಿಯಲ್ಲಿ ಅವರು ಬಾರಕಾಡು ಅಂಗನವಾಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ಈಗ ತಕ್ಷಣ ಅವರನ್ನು ಅಲ್ಲಿಂದ ಸುಮಾರು ನಾಲ್ಕು ಕಿ.ಮೀ. ದೂರದ ಕೆಳಗಿನಪೇಟೆ ಅಂಗನವಾಡಿಗೆ ಯಾವುದೇ ಕಾರಣವಿಲ್ಲದೆ ವರ್ಗಾಯಿಸಲಾಗಿದೆ. ಇದರ ಬಗ್ಗೆ ಅಧಿಕಾರಿಗಳೊಂದಿಗೆ ವಿಶ್ಲೇಷಣೆ ಮಾಡಿದಾಗ ಅಧಿಕಾರಿಗಳು, ನಮಗೆ ಮಾಡಲು ಆಗುತ್ತಿಲ್ಲ, ನಮಗೆ ಬೇರೆ ಬೇರೆ ಒತ್ತಡಗಳು ಇದ್ದಾವೆ, ನಮ್ಮ ಜಿಲ್ಲಾ ಉಸ್ತುವಾರಿ ಸಚಿವರಿಂದಲೇ ಇದಕ್ಕೆ ಒತ್ತಡವಿದೆ, ಆದ್ದರಿಂದ ಅನಿವಾರ್ಯವಾಗಿ ಇದನ್ನು ಮಾಡಬೇಕಾಯಿತು ಎಂದು ಹೇಳುತ್ತಾರೆ. ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ, ಸಾಮಾಜಿಕ ನ್ಯಾಯದ ಬಗ್ಗೆ ಹೇಳುವಾಗ ಈ ರೀತಿ ಅಂಗವಿಕಲರಿಗೆ ತಾವು ಪೂರ್ಣ ಪ್ರಮಾಣದ ಎಲ್ಲಾ